







# ಗೂಗಲ್ ವಾಲೆಟ್; ಆಧಾರ್‌ಗೆ ಸ್ಥಾನ

**ಡಿಜಿಟಲ್ ವಾಲೆಟ್ ಆ್ಯಪ್ ಆದ 'ಗೂಗಲ್ ವಾಲೆಟ್'ನಲ್ಲಿ ಈಗ 'ಆಧಾರ್'ಗೂ ಸ್ಥಾನ ಸಿಕ್ಕಿದೆ. ಅಗತ್ಯವಿದ್ದೆಡೆ ಈ ವಾಲೆಟ್ ಮೂಲಕವೇ ಬಳಸಬಹುದಾಗಿದೆ.**

**■ ಶಶಿಕುಮಾರ್ ಸಿ.**

ಗೂಗಲ್ ವಾಲೆಟ್– ಆಧಾರ್ ಒಂದಾಗುತ್ತಿವೆ... 'ಗೂಗಲ್ ವಾಲೆಟ್', ಬಳಕೆದಾರರ ಡಿಜಿಟಲ್ ವಾಲೆಟ್ ಆ್ಯಪ್. ಆಧಾರ್ ಕಾರ್ಡ್, ದೇಶದ ಜನರಿಗೆ ಸರ್ಕಾರ ಒದಗಿಸಿರುವ 12 ಅಂಕಿಯ ವಿಶಿಷ್ಟ ಗುರುತಿನ ಸಂಖ್ಯೆ. ಇವೆರಡಕ್ಕೂ ಏನು ಸಂಬಂಧ?

ಸಂಬಂಧವಿದೆ. ಭಾರತದ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ–ಆಧಾರ್) ಮತ್ತು ಗೂಗಲ್ ಈಚೆಗೆ ಒಪ್ಪಂದವೊಂದಕ್ಕೆ ಸಹಿ ಹಾಕಿದ್ದು, ಅದರನ್ವಯ ಜನರ ಆಧಾರ್ ಕಾರ್ಡಿನ ಡಿಜಿಟಲ್ ಸ್ವರೂಪವನ್ನು ಗೂಗಲ್ ವಾಲೆಟ್‌ನಲ್ಲಿ ಒದಗಿಸಲಾಗುತ್ತದೆ. ಬಳಕೆದಾರರು ತಮ್ಮ ಆಧಾರ್ ವಿವರಗಳನ್ನು ಈ ವಾಲೆಟ್‌ನಲ್ಲಿ ಸುರಕ್ಷಿತವಾಗಿ ಸೇವ್ ಮಾಡಲು ಅನುಮತಿಸುವ ಫೀಚರ್ ಇದು. 'ಗೂಗಲ್ ವಾಲೆಟ್' ನಿಮ್ಮ ಸ್ಮಾರ್ಟ್‌ಫೋನ್ ಅನ್ನು ಜೇಬಿನಲ್ಲಿ ಇಡುವ ವಾಲೆಟ್‌ನಂತೆ ಬಳಸಲು ನೆರವಾಗುತ್ತದೆ.

'ಕಡ್ಡಾಯವಲ್ಲ' ಎಂದು ಸರ್ಕಾರ ಹಾಗೂ ಕೋರ್ಟ್ ಹೇಳಿದ್ದರೂ ಆಧಾರ್ ಕಾರ್ಡ್ ಈಗ ಬಹುಪಯೋಗಿ. ಕೆಲವೆಡೆ ಕಾರ್ಡ್ ಇಲ್ಲದೆ ಕೆಲಸಗಳು ಮುಂದೆ ಸಾಗುವುದೇ ಇಲ್ಲ. ಸರ್ಕಾರಿ ಸೇವೆ, ಬ್ಯಾಂಕಿಂಗ್ ವಹಿವಾಟು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಪಡೆಯಲು... ಹೀಗೆ ಹಲವೆಡೆ ಆಧಾರ್ ಬೇಕೇ ಬೇಕು. ಬಯೊಮೆಟ್ರಿಕ್ ಮತ್ತು ಜನಸಂಖ್ಯಾ ದತ್ತಾಂಶ ಎರಡನ್ನೂ ಒಳಗೊಂಡ ಗುರುತಿನ ಪುರಾವೆಗಾಗಿ ಬಂದ ಈ ಕಾರ್ಡ್ ದೇಶದ ಪ್ರತಿಯೊಬ್ಬರ ಜೀವನದ ಪ್ರಮುಖ ಅಂಶವಾಗಿ ವಿಕಸನಗೊಂಡಿದೆ.

ಭೌತಿಕ ಆಧಾರ್ ಕಾರ್ಡ್ ಅನ್ನು ಎಲ್ಲೆಡೆ ಕೊಂಡೊಯ್ಯಲು ಸಾಧ್ಯವಿಲ್ಲ. ಇದಕ್ಕಾಗಿಯೇ ಡಿಜಿಲಾಕರ್‌ನಂತಹ ಅಧಿಕೃತ ಆ್ಯಪ್‌ಗಳು ಇದ್ದು, ಡಿಎಲ್, ಪಾನ್‌ಕಾರ್ಡ್, ಅಂಕಪಟ್ಟಿ ಸೇರಿದಂತೆ ಪ್ರಮುಖ ದಾಖಲಾತಿಗಳನ್ನು ಈ ಆ್ಯಪ್‌ಗಳಲ್ಲಿ ಡಿಜಿಟಲ್ ಸ್ವರೂಪದಲ್ಲಿ ಡೌನ್‌ಲೋಡ್ ಮಾಡಿ, ಸೇವ್ ಮಾಡಿಡಬಹುದು. ಇದೇ ಮಾದರಿಯಲ್ಲಿ ಗೂಗಲ್ ವಾಲೆಟ್‌ನಲ್ಲಿ ಆಧಾರ್ ಕಾರ್ಡಿನ ಡಿಜಿಟಲ್ ಸ್ವರೂಪವನ್ನು ಸೇವ್ ಮಾಡಬಹುದು. ಅಗತ್ಯವಿರುವೆಡೆ ಡಿಜಿಟಲ್ ರೂಪದಲ್ಲಿ ಬಳಸಬಹುದು. ಈ ವಿಧಾನ ಅಧಿಕೃತವಾಗಿದೆ.

ವಾಲೆಟ್‌ನಲ್ಲಿ ಆಧಾರ್ ವಿವರ ಸೇವ್ ಮಾಡುವುದರಿಂದ ಆನ್‌ಲೈನ್ ಮತ್ತು ಆಫ್‌ಲೈನ್ ಪರಿಶೀಲನಾ ಉದ್ದೇಶಗಳಿಗಾಗಿ ವಾಲೆಟ್ ಮೂಲಕವೇ ಬಳಸಬಹುದು ಎನ್ನುವುದು ಗೂಗಲ್ ಮಾತು. ವಯಸ್ಸಿನ ಪರಿಶೀಲನೆ ಅಗತ್ಯವಿರುವ ಸಂದರ್ಭಗಳಲ್ಲಿ, ಆಧಾರ್ ಕಾರ್ಡಿನ ಪೂರ್ಣ ವಿವರಗಳನ್ನು ಒದಗಿಸಲಾಗುತ್ತದೆ. ಒಮ್ಮೆ ಆಧಾರ್ ವಿವರವನ್ನು ವಾಲೆಟ್‌ಗೆ ಸೇರಿಸಿದರೆ, ಇಂಟರ್‌ನೆಟ್ ಇಲ್ಲದ ಸಮಯದಲ್ಲೂ ಅದನ್ನು ಪ್ರದರ್ಶಿಸಲು ಸಾಧ್ಯವಾಗುತ್ತದೆ. ಈ ಫೀಚರ್ ಬಳಸಲು ಆ್ಯಂಡ್ರಾಯ್ಡ್ 9 ಅಥವಾ ನಂತರದ ಆವೃತ್ತಿಯ ಸ್ಮಾರ್ಟ್‌ಫೋನ್‌ಗಳ ಅಗತ್ಯವಿದೆ.

### ಭದ್ರತೆ ಮತ್ತು ಸುರಕ್ಷತೆ

ವಾಲೆಟ್ ಮೂಲಕ ಆಧಾರ್ ಬಳಸುವುದರಿಂದ ಕಾರ್ಡ್ ಕಳೆದುಹೋಗುವ ಭಯವಿಲ್ಲ. ಭೌತಿಕ ಆಧಾರ್ ಕಾರ್ಡ್ ಬಳಸುವಾಗ, ಅದು ಕಳೆದುಹೋಗುವ, ಹಾನಿಯಾಗುವ ಭೀತಿ ಇರುತ್ತದೆ. ಬಯೊಮೆಟ್ರಿಕ್ ಲಾಕ್ ವ್ಯವಸ್ಥೆ ಇಲ್ಲಿದ್ದು, ಫೋನ್‌ನ ಫಿಂಗರ್‌ಪ್ರಿಂಟ್ ಅಥವಾ ಫೇಸ್‌ಲಾಕ್ ಮೂಲಕ ಮಾತ್ರ ವಾಲೆಟ್ ಪ್ರವೇಶಿಸಲು ಸಾಧ್ಯ. ಇದರಿಂದ ಬೇರೆಯವರು ನಿಮ್ಮ ಅನುಮತಿಯಿಲ್ಲದೆ ಆ್ಯಪ್ ಒಳಗೆ ನುಸುಳಲು ಅಸಾಧ್ಯ.

ವಿಮಾನ ನಿಲ್ದಾಣಗಳ ಪ್ರವೇಶ ದ್ವಾರದಲ್ಲಿ ಅಥವಾ ರೈಲ್ವೆ ಪ್ರಯಾಣದ ಸಮಯದಲ್ಲಿ ಗುರುತಿನ ಚೀಟಿ ತೋರಿಸಲು ಈ ವಿಧಾನ ಅತ್ಯಂತ ವೇಗವಾದ ಉಪಕ್ರಮವಾಗಿದೆ. ಭೌತಿಕ ಕಾರ್ಡಿಗಾಗಿ ಹುಡುಕಾಡುವ ಪ್ರಮೇಯವೇ ಎದುರಾಗದು. ಇದೊಂದು ರೀತಿ ಕಾಗದ ರಹಿತ ಪ್ರಕ್ರಿಯೆಯಾಗಿದ್ದು, ಬಳಕೆಯ ವಿಧಾನ ಸುಲಭ. ಹೋಟೆಲ್ ಚೆಕ್‌ಇನ್ ಅಥವಾ ಸಿನಿಮಾ ಟಿಕೆಟ್ ಬುಕ್ಕಿಂಗ್‌ನಂತಹ ಸಂದರ್ಭಗಳಲ್ಲಿ ಡಿಜಿಟಲ್ ಆಧಾರ್ ತೋರಿಸುವುದು ಸುಲಭ ಮತ್ತು ಪರಿಸರಸ್ನೇಹಿ. ■

### ಪಾಲುದಾರರ ಜೊತೆ ಮಾತ್ರ...

- ಪಿವಿಆರ್ ಐನಾಕ್ಸ್ – ವಯಸ್ಸಿನ ಪರಿಶೀಲನೆಗಾಗಿ.
- ಭಾರತ್ ಮ್ಯಾಟ್ರಿಮೊನಿ – ಪ್ರೊಫೈಲ್ ಪರಿಶೀಲನೆಗಾಗಿ.
- ಅಟ್ಲಿಸ್ – ಅಂತರರಾಷ್ಟ್ರೀಯ ವೀಸಾ ಅರ್ಜಿಗಳ ಭರ್ತಿ ವೇಳೆ.
- ಮೈಗೇಟ್, ಗಿಗ್ ಪೂರೈಕೆದಾರರು– ಡೆಲಿವರಿ ಮತ್ತು ಸೇವಾ ಸಿಬ್ಬಂದಿಯ ಪರಿಶೀಲನೆಗಾಗಿ, ಇತ್ಯಾದಿ.

### ಸೇವ್ ಮಾಡುವುದು ಹೇಗೆ?

- ಅಪ್ಲಿಕೇಶನ್ ಓಪನ್ ಮಾಡಿ.
- ಸೈನ್ ಇನ್ ಆಗಿ.
- ನಿಮ್ಮ ಗುರುತು ಪರಿಶೀಲಿಸಿ.
- 'ಆ್ಯಡ್ ಟು ವಾಲೆಟ್' ಕ್ಲಿಕ್ಕಿಸಿ.
- ಗೂಗಲ್ ವಾಲೆಟ್ ಆಯ್ಕೆ ಮಾಡಿ.
- ಬಳಿಕ 'ಕಂಟಿನ್ಯೂ' ಆಯ್ಕೆ ಕ್ಲಿಕ್ಕಿಸಿ.
- ವ್ಯಾಲೆಟ್‌ಗೆ ಆಧಾರ್ ಕಾರ್ಡ್ ಸೇರಿಸಲು ಸ್ಕ್ರೀನ್ ಮೇಲಿನ ಸೂಚನೆಗಳನ್ನು ಅನುಸರಿಸಿ.

